ದಿಃ 17-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಜಿ.ಆರ್.ವಿ ಪ್ರತಿವಾದಿ ಪರ ವಕೀಲರಿಂದಃ

ನಾನು ದೊಡ್ಡಕುರುಗೋಡು ಗ್ರಾಮದ ವಿದುರಾ ಕಾಲೋನಿಯಲ್ಲಿ ವಾಸವಿದ್ದೇನೆ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನ್ನನ್ನು 7 ನೇ ವಾದಿಯು ಕರೆದುಕೊಂಡು ಬಂದಿರುತ್ತಾರೆ. ವಾದಿಗಳು ನನ್ನ ಸಂಬಂಧಿಕರಲ್ಲ. ವಾದಿಗಳ ತಂದೆ ಬದುಕಿದ್ದಾಗ ಅವರ ಬಳಿ ಕೂಲಿ ಕೆಲಸಕ್ಕೆ ಬರುತ್ತಿದ್ದ ಕಾರಣ ನನಗೆ ವಾದಿಗಳ ಪರಿಚಯವಿರುತ್ತದೆ. ನಾನು ವಾದಿಗಳ ತಂದೆಯ ಬಳಿ ಕೂಲಿ ಕೆಲಸಕ್ಕೆ ಸುಮಾರು 50 ವರ್ಷಗಳ ಹಿಂದೆ ಹೋಗುತ್ತಿದ್ದೆನು. ಸುಮಾರು 30 ವರ್ಷಗಳ ಹಿಂದೆ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಡೆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಮತ್ತು ಪಟ್ಟಾ ಪುಸ್ತಕವನ್ನು ನಾನು ನೋಡಿರುವುದಿಲ್ಲ. ದಾವಾ ಆಸ್ತಿಯ ಪಹಣಿ ಮತ್ತು ಪಟ್ಟಾ ಪುಸ್ತಕ ಯಾರ ಹೆಸರಿನಲ್ಲಿ ಬರುತ್ತಿದೆ ಎಂಬುದು ನನಗೆ ಗೊತ್ತಿಲ್ಲ. 1982 ರಲ್ಲಿ ದಾವಾ ಆಸ್ತಿಯಲ್ಲಿ ತನ್ನ ಅರ್ಧ ಹಿಸ್ಸೆಯನ್ನು ನರಸಿಂಹಪ್ಪರವರು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ. 1982 ನೇ ಇಸವಿಯಲ್ಲಿ ಕ್ರಯಪತ್ರವಾದ ನಂತರ ಪ್ರತಿವಾದಿಯೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿ ನಾನು ಕೂಲಿಗೆ ಹೋಗುವಾಗ ನರಸಿಂಹಪ್ಪರವರು ಸ್ವಾಧೀನದಲ್ಲಿದ್ದರು, ತದನಂತರ ಏನಾಗಿದೆ ಎಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ವಾದಿಗಳಿಗೆ ಅನುಕೂಲ ಮಾಡಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆಯ ಪ್ರತಿವಾದಿ ನನಗೆ ಗೊತ್ತಿಲ್ಲ, ಅವರನ್ನು ನಾನು ನೋಡಿಲ್ಲ. ವಾದಿಗಳ ಮಾತನ್ನು ಕೇಳಿಕೊಂಡು ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು